ದಿನಾಂಕಃ 09-02-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ- ವಾದಿ ಪರವಾಗಿ ಶ್ರೀ. ಎಸ್.ಆರ್.ಆರ್. ವಕೀಲರಿಂದಃ-**

ನನ್ನ ತಾತನ ಹೆಸರು ಕೊಂಡಪ್ಪ ಎಂಬುದಾಗಿರುತ್ತದೆ. ನನ್ನ ತಾತನಿಗೆ ವೆಂಕಟಯ್ಯ, ರಾಮಯ್ಯ ಮತ್ತು ಹನುಮಂತಪ್ಪ ಎಂಬ ಸಹೋದರರು ಇದ್ದರು ಎಂದರೆ ಸರಿ. ನನ್ನ ತಾತ ಕೊಂಡಪ್ಪನ ತಮ್ಮ ವೆಂಕಟಯ್ಯನಿಗೆ ರಂಗಪ್ಪ ಎಂಬ ಒಬ್ಬನೇ ಮಗನಿದ್ದನು. ರಂಗಪ್ಪನ ಮಗ ಈ ದಾವೆಯ ವಾದಿಯಾಗಿರುತ್ತಾರೆ. ನನ್ನ ತಾತ ಕೊಂಡಪ್ಪನ ತಮ್ಮ ರಾಮಯ್ಯನಿಗೆ ಕೊಂಡಪ್ಪ ಎಂಬ ಒಬ್ಬನೇ ಮಗನಿದ್ದನು. ಕೊಂಡಪ್ಪನಿಗೆ ವೆಂಕಟಲಕ್ಷ್ಮಮ್ಮ, ರಾಮಣ್ಣ, ಅಲುವೇಲಮ್ಮ, ಶ್ರೀನಿವಾಸ ಮತ್ತು ಶಾಂತಮ್ಮ ಎಂಬ ಮಕ್ಕಳುಗಳಿದ್ದರು ಎಂದರೆ ಸರಿ. ನನ್ನ ತಂದೆ ತಿಮ್ಮಪ್ಪನಿಗೆ ಚೌಡಪ್ಪ ಎಂಬ ಅಣ್ಣ ಇದ್ದಾರೆ ಎಂದರೆ ಸರಿ. ನನ್ನ ದೊಡ್ಡಪ್ಪ ಚೌಡಪ್ಪನಿಗೆ ವೆಂಕಟಮ್ಮ, ರಾಮಕೃಷ್ಣಪ್ಪ, ಅಚ್ಚಮ್ಮ ಮತ್ತು ರಾಮಾಂಜಿನಪ್ಪ ಎಂಬ ಮಕ್ಕಳುಗಳಿದ್ದಾರೆ. ನನಗೆ ಲಕ್ಷ್ಮೀದೇವಮ್ಮ ಎಂಬ ತಂಗಿ ಮತ್ತು ವೆಂಕಟಮ್ಮ ಎಂಬ ಅಕ್ಕ ಇದ್ದಾರೆ. ನನ್ನ ತಾತನ ಕೊನೆಯ ತಮ್ಮ ಹನುಮಂತಪ್ಪನಿಗೆ ತಿಮ್ಮಕ್ಕ ಎಂಬ ಹೆಂಡತಿ ಇದ್ದು, ಅವರು ಮೃತಪಟ್ಟಿರುತ್ತಾರೆ, ಅವರಿಗೆ ಮಕ್ಕಳುಗಳು ಇರುವುದಿಲ್ಲ. ನನ್ನ ತಾತನ ನಾಲ್ಕು ಜನ ಸಹೋದರರ ನಡುವೆ ಭಾಗ ಮಾಡಿಕೊಂಡಿರಲಿಲ್ಲ ಎಂದರೆ ಸಾಕ್ಷಿಯು, ಅವರಿಗೆ ಯಾವುದೇ ಆಸ್ತಿಗಳು ಇಲ್ಲದೇ ಇರುವುದರಿಂದ ಯಾವುದೇ ಭಾಗ

ಮಾಡಿಕೊಂಡಿರುವುದಿಲ್ಲ ಎಂದು ಸ್ವತಃ ನುಡಿಯುತ್ತಾರೆ. ದಾವಾ ಆಸ್ತಿಗಳು ಕೊಂಡಪ್ಪನ ಮಗ ಚೌಡಪ್ಪನಿಗೆ ಸೇರಿದ ಆಸ್ತಿಗಳಾಗಿರುತ್ತವೆ. ದಾವಾ ಆಸ್ತಿಗಳು ಚೌಡಪ್ಪನವರಿಗೆ ಬ್ರಾಹ್ಮಣರ ಹತ್ತಿರ ಕೆಲಸ ಮಾಡುತ್ತಿದ್ದಾಗ ಅವರಿಂದ ಪಡೆದ ಆಸ್ತಿಗಳಾಗಿರುತ್ತವೆ. ಆ ಜಮೀನುಗಳು ಜೋಡಿ ಗ್ರಾಮದ ಜಮೀನುಗಳಾಗಿದ್ದು, ಕೆಲಸ ಮಾಡುತ್ತಿದ್ದ ವ್ಯಕ್ತಿಗಳನ್ನು ನೋಡಿ ಆ ಜಮೀನುಗಳನ್ನು ನೀಡಿರುತ್ತಾರೆ.

ದಾವಾ ಆಸ್ತಿಗೆ ಸಂಬಂಧಪಟ್ಟ ಎಲ್ಲಾ ಪಹಣಿಗಳನ್ನು ನಾನು ನೋಡಿರುತ್ತೇನೆ. ದಾವಾ ಆಸ್ತಿಗಳ ಖಾತೆ ಮತ್ತು ಪಹಣಿಗಳು ಯಾರ ಯಾರ ಹೆಸರಿನಲ್ಲಿವೆ ಎಂಬುದು ನನಗೆ ಗೊತ್ತು. ದಾವಾ ಐಟಂ ನಂ.1 ರಿಂದ 4 ರ ಆಸ್ತಿಗಳು ಈ ಹಿಂದೆ ನನ್ನ ತಂದೆ ದ ನನ್ನ ದೊಡ್ಡಪ್ಪ, ನನ್ನ ತಾತನ ತಮ್ಮ ವೆಂಕಟಯ್ಯನ ಮಗ ರಂಗಪ್ಪ, ರಾಮಯ್ಯನ ಮಗ ಕೊಂಡಪ್ಪ ಮತ್ತು ಹನುಮಂತಪ್ಪನ ಹೆಂಡತಿ ತಿಮ್ಮಕ್ಕರವರ ಹೆಸರಿನಲ್ಲಿವೆ ಎಂದರೆ ಸಾಕ್ಷಿಯು, ಪಹಣಿ ಪತ್ರಿಕೆಯ ಕಲಂ ನಂ.12 ರಲ್ಲಿದ್ದು ಕಲಂ ನಂ.9 ರಲ್ಲಿ ನಮೂದಾಗಿರುವುದಿಲ್ಲ ಎಂದು ಸ್ವತಃ ನುಡಿಯುತ್ತಾರೆ. ದಾವಾ ಆಸ್ತಿಗಳ ಪಹಣಿ ಪತ್ರಿಕೆಗಳ ಕಲಂಗಳಲ್ಲಿ ನಮೂದಾಗಿರುವ ವ್ಯಕ್ತಿ ಚೌಡ ಬಿನ್ ಕೊಂಡ ಎಂಬುವವರು ನನ್ನ ತಾತನ ತಂದೆ ಎಂದರೆ ಸರಿಯಲ್ಲ. ಸಾಕ್ಷಿಯು, ಅವರು ನನ್ನ ದೊಡ್ಡಪ್ಪನವರಾಗಿರುತ್ತಾರೆ ಎಂದು ಸ್ವತಃ ನುಡಿಯುತ್ತಾರೆ. ಯಾವ ವ್ಯಕ್ತಿಗಳು ಆ ಜಮೀನುಗಳಲ್ಲಿ ವ್ಯವಸಾಯ ಮಾಡುತ್ತಿರುತ್ತಾರೋ ಅವರ ಹೆಸರನ್ನು ಪಹಣಿ

ಪತ್ರಿಕೆಗಳ ಕಲಂ 12 ರಲ್ಲಿ ನಮೂದಿಸುತ್ತಾರೆ ಎಂದರೆ ಸರಿ. ದಾವಾ ಆಸ್ತಿಗಳ ಪಹಣಿ ಪತ್ರಿಕೆಗಳಲ್ಲಿ 1980-1981 ರಿಂದ ಅವರು ಉಳುಮೆ ಮಾಡುತ್ತಿರುವ ಕಾರಣ ಆ ಐದು ಜನರ ಹೆಸರುಗಳು ನಮೂದಾಗಿರುತ್ತವೆ ಎಂದರೆ ಸರಿ. ದಾವಾ ಆಸ್ತಿಗಳು ಒಟ್ಟು ಕುಟುಂಬದ ಆಸ್ತಿಗಳಾಗಿರುವ ಕಾರಣ ಆ ಐದು ಜನರ ಹೆಸರುಗಳು ಒಟ್ಟಿಗೆ ನಮೂದಾಗಿರುತ್ತದೆ ಎಂದರೆ ಸರಿಯಲ್ಲ.

ದಾವಾ ಆಸ್ತಿಗಳಲ್ಲಿ ನನ್ನ ತಾತ ಹಾಗೂ ಅವರ ಸಹೋದರರ ನಡುವೆ ಭಾಗ ಮಾಡಿಕೊಂಡಿರುವುದಿಲ್ಲ. 15 ಮತ್ತು 16 ನೇ ಪ್ರತಿವಾದಿಗಳ ಹೆಸರು ದಾವಾ ಐಟಂ ನಂ.1 ರ ಆಸ್ತಿಯಲ್ಲಿ ನಮೂದಾಗಿದೆ ಎಂದರೆ ಅವರುಗಳೇ ಬರೆದುಕೊಂಡಿರುತ್ತಾರೆ ಎಂದು ಸ್ವತಃ ನುಡಿಯುತ್ತಾರೆ. ದಾವಾ ಐಟಂ ನಂ.1 ರ ಆಸ್ತಿಯಲ್ಲಿ ಹನುಮಂತಪ್ಪನವರ ಹೆಂಡತಿ ತಿಮ್ಮಕ್ಕರವರು ವ್ಯವಸಾಯ ಮಾಡುತ್ತಿದ್ದು, ಆ ಆಸ್ತಿಯಲ್ಲಿ 15 ಮತ್ತು 16 ನೇ ಪ್ರತಿವಾದಿಗಳು ಉಳುಮೆ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಹಳೇ ಸರ್ವೆ ನಂಬರ್ 54 ರಲ್ಲಿ ತಿಮ್ಮಕ್ಕರವರು ವ್ಯವಸಾಯ ಮಾಡುತ್ತಿದ್ದ ಜಮೀನಿನಲ್ಲಿ ನಾಗರಾಜು ಮತ್ತು ಗೋವಿಂದಪ್ಪರವರು ವ್ಯವಸಾಯ ಮಾಡುತ್ತಿದ್ದಾರೆ ಎಂದರೆ ಸರಿ. ನಾಗರಾಜು ಮತ್ತು ಗೋವಿಂದಪ್ಪರವರು ತಿಮ್ಮಕ್ಕನ ಅಕ್ಕನ ಮೊಮ್ಮಕ್ಕಳುಗಳಾಗಿರುತ್ತಾರೆ. ದಾವಾ ಆಸ್ತಿಗಳು ನನ್ನ ತಾತ ಮತ್ತು ಅವರ ಸಹೋದರರ ಒಟ್ಟು ಕುಟುಂಬದ ಪಿತ್ರಾರ್ಜಿತ ಆಸ್ತಿಗಳು ಎಂದರೆ ಸರಿಯಲ್ಲ.

ಅವರುಗಳ ನಡುವೆ ಇಲ್ಲಿಯವರೆವಿಗೂ ಸಹ ವಿಭಾಗ ಮಾಡಿಕೊಂಡಿಲ್ಲ ಎಂದರೆ ಸರಿ. ವಾದಿ ವೆಂಕಟಯ್ಯನ ಮೊಮ್ಮಗನಾದ ಕಾರಣ ದಾವಾ ಆಸ್ತಿಗಳಲ್ಲಿ ಆತನಿಗೆ ನಾಲ್ಕನೇ ಒಂದು ಭಾಗ ಇದೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ಹುಣಸೇ ಮರಗಳು ಇವೆ. ಜನವರಿ 2023 ರಂದು ದಾವಾ ಆಸ್ತಿಯಲ್ಲಿರುವ ಹುಣಸೇ ಮರದ ಫಸಲನ್ನು ವಾದಿಯರಿಗೆ ಕೊಡಲು ತಕರಾರು ಮಾಡಿದೆವು ಎಂದರೆ ಸರಿ. ಆ ಸಮಯದಲ್ಲಿ ವಾದಿ ನನ್ನ ಹಾಗೂ ಇತರೆ ಪ್ರತಿವಾದಿಯರನ್ನು ದಾವಾ ಆಸ್ತಿಗಳಲ್ಲಿ ಹಿಸ್ಸೆ ಕೊಡುವಂತೆ ಕೇಳಿದರು ಎಂದರೆ ಸರಿಯಲ್ಲ. ಮುಂದುವರೆದು ಸಾಕ್ಷಿ ನ್ಯಾಯಾಲಯದಲ್ಲಿಯೇ ಭಾಗ ಕೊಡುತ್ತೇವೆ ಎಂದು ಹೇಳಿರುತ್ತೇವೆ ಎಂದು ಸ್ವತಃ ನುಡಿಯುತ್ತಾರೆ. ನಾವು ಹಿಸ್ಸೆ ಕೊಡುವುದಿಲ್ಲ ಎಂದು ಹೇಳಿದ ಕಾರಣ ವಾದಿಗಳು ಈ ದಾವೆ ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ನಾನು ಈಗಲೂ ಸಹ ವಾದಿ ದಾವಾ ಆಸ್ತಿಯಲ್ಲಿ ಕೋರಿರುವಂತೆ ಹಿಸ್ಸೆ ಕೊಡಲು ತಯಾರಿದ್ದೇವೆ.

**ಮರು ವಿಚಾರಣೆಃ- ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ಗಣಕೀಕೃತಗೊಳಿಸಲಾಯಿತು)

ಓ.ಹೇ.ಸಾ.ಸ.ಇ.ಒ.

ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆಎಂಎಫ್‌ಸಿ, ಮಧುಗಿರಿ